28

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಆರೋಗ್ಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 5/2/2020

# ಚೀನಿಯರ ವೀಸಾ ರದ್ದು

## ಮಾರಕ ಕರೋನಾ ಸೋಂಕು ಭೀತಿ ಹಿನ್ನೆಲೆ । ಕೇಂದ್ರ ಸರ್ಕಾರದ ಕಠಿಣ ಕ್ರಮ

ನವದೆಹಲಿ: ಮಾರಕ ಕರೋನಾ ಸೋಂಕಿನ ಹಿನ್ನೆಲೆಯಲ್ಲಿ ಜನವರಿ 15ರ ನಂತರ ಚೀನಾ ನಾಗರಿಕರಿಗೆ ಮಂಜೂರು ಮಾಡಿರುವ ಎಲ್ಲ ವೀಸಾಗಳನ್ನು ಕೇಂದ್ರ ಸರ್ಕಾರ ರದ್ದು ಮಾಡಿದೆ. ಅಲ್ಲದೆ ಚಾಲ್ತಿಯಲ್ಲಿರುವ ವೀಸಾಗಳನ್ನು ಅಮಾನ್ಯಗೊಳಿಸಲಾಗಿದೆ ಎಂದು ಹೇಳಿದೆ. ಚೀನಾದ ನಾಗರಿಕರು ಭಾರತದ ವೀಸಾಗೆ ಹೊಸದಾಗಿ ಅರ್ಜಿ ಸಲ್ಲಿಸಲು ಬೀಜಿಂಗ್‌ನಲ್ಲಿರುವ ರಾಯಭಾರ ಕಚೇರಿ ಅಥವಾ ಶಾಂಘೈ, ಗುವಾಂಗ್‌ಜುನಲ್ಲಿನ ದೂತಾವಾಸಗಳನ್ನು ಸಂಪರ್ಕಿಸಬಹುದು ಎಂದು ಚೀನಾದಲ್ಲಿರುವ ಭಾರತೀಯ ರಾಯಭಾರ ಕಚೇರಿ ಟ್ವೀಟ್ ಮಾಡಿದೆ.

ಜನವರಿ 15ರ ಬಳಿಕ ಭಾರತಕ್ಕೆ ಬಂದಿರುವ ಮತ್ತು ಭಾರತದಲ್ಲಿ ಉಳಿದಿರುವ ಚೀನಾದ ನಾಗರಿಕರು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನೀಡಲಾಗಿರುವ ಹಾಟ್‌ಲೈನ್ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕು. ಚೀನಾದ ಪ್ರವಾಸಿಗರು ಭಾರತ ಭೇಟಿ ಮುಂದಾಗುವ ಮೊದಲು ಈ ಸಂಖ್ಯೆಗೆ ಕರೆ ಮಾಡಿ ತಮ್ಮ ವೀಸಾದ ಮಾನ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದೆ. ಜತೆಗೆ ಅನ್ಯ ದೇಶಗಳ ಪ್ರಜೆಗಳಿಗೆ ಚೀನಾದಿಂದ ಭಾರತಕ್ಕೆ ಪ್ರಯಾಣಿಸಲು ಅನುಮತಿ ನೀಡಬಾರದು ಎಂದು ಭಾರತದ ಎಲ್ಲ ವಿಮಾನಯಾನ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ.

**ಸಾಂಕ್ರಾಮಿಕವಲ್ಲ:** ಚೀನಾದಿಂದ ಎರಡು ಡಜನ್‌ಗಳಿಗೂ ಹೆಚ್ಚು ದೇಶಗಳಿಗೆ ಹರಡಿರುವ ಮಾರಣಾಂತಿಕ ಕರೋನಾ ವೈರಸ್ ಇನ್ನೂ ಸಾಂಕ್ರಾಮಿಕವಾಗಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

## ಇಬ್ಬರು ವಿದೇಶಕ್ಕೆ ಪರಾರಿ

ಕರೋನಾ ವೈರಸ್ ಕಾಣಿಸಿಕೊಂಡಿದ್ದ ಚೀನಾದ ವುಹಾನ್ ನಗರದಿಂದ ಕೇರಳಕ್ಕೆ ಆಗಮಿಸಿದ್ದ ಇಬ್ಬರು ಸರ್ಕಾರದ ಸೂಚನೆಯನ್ನು ಧಿಕ್ಕರಿಸಿ ವಿದೇಶಕ್ಕೆ ಪರಾರಿಯಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಚೀನಾದಿಂದ 2 ಸಾವಿರದಷ್ಟು ಮಂದಿ ಕೇರಳೀಯರು ಇತ್ತೀಚಿನ ದಿನಗಳಲ್ಲಿ ವಾಪಸ್ಸಾಗಿದ್ದಾರೆ. ಕೋಯಿಕ್ಕೋಡು ಆಸುಪಾಸಿನ 60 ಮಂದಿ ಇವರಲ್ಲಿ ಸೇರಿದ್ದಾರೆ. ಇವರಲ್ಲಿ ಇಬ್ಬರು ವಿದೇಶಕ್ಕೆ ತೆರಳಿದ್ದು, ಇತರ 58 ಮಂದಿಯನ್ನು ಅವರವರ ಮನೆಗಳಲ್ಲಿ ಇರಿಸಿ ನಿಗಾ ವಹಿಸಲಾಗುತ್ತಿದೆ. ವಿದೇಶಕ್ಕೆ ತೆರಳಿರುವ ಇಬ್ಬರನ್ನು ಪತ್ತೆ ಹಚ್ಚಿ ಅವರ ಬಗ್ಗೆ ತೀವ್ರ ನಿಗಾ ವಹಿಸಲು ಇಲಾಖೆ ತೀರ್ಮಾನಿಸಿದೆ.



ಚೀನಾದ ವುಹಾನ್ ಕ್ರೀಡಾಂಗಣದಲ್ಲಿ ನಿರ್ಮಿಸಿರುವ ತಾತ್ಕಾಲಿಕ ಆಸ್ಪತ್ರೆ

## ಆಯುಷ್ ಇಲಾಖೆ ಸ್ಪಷ್ಟನೆ

ಹೋಮಿಯೋಪತಿ ಮತ್ತು ಯುನಾನಿ ಔಷಧಗಳು ಕರೋನಾ ಸೋಂಕನ್ನು ನಿಯಂತ್ರಿಸಬಲ್ಲ ಖಚಿತ ಔಷಧವೆಂದು ಹೇಳಿಲ್ಲ ಎಂದು ಆಯುಷ್ ಸಚಿವಾಲಯ ಸ್ಪಷ್ಟನೆ ನೀಡಿದೆ. ಕರೋನಾದಂತಹ ಸಾಂಕ್ರಾಮಿಕ ಸೋಂಕುಗಳನ್ನು ತಡೆಗಟ್ಟಲು ಅನುಸರಿಸಬೇಕಾದ ಸಾಮಾನ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಮಾತ್ರ ನಾವು ಸೂಚಿಸಿದ್ದೇವೆ. ಇಂತಹ ಸೋಂಕುಗಳಿಗೆ ಆಯಾ ವೈದ್ಯಕೀಯ ವ್ಯವಸ್ಥೆಯಲ್ಲಿನ ವಿಧಾನದ ತತ್ವಗಳ ಆಧಾರದ ಮೇಲೆ ಮುನ್ನೆಚ್ಚರಿಕಾ ಕ್ರಮಗಳನ್ನು ಸೂಚಿಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ. ಕಳೆದ ಜ.29ರಂದು ಸಚಿವಾಲಯ ಕರೋನಾ ಸೋಂಕು ತಡೆಗಟ್ಟುವ ಹಿನ್ನೆಲೆ ಹೋಮಿಯೋಪತಿ ಮತ್ತು ಯುನಾನಿ ಔಷಧಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂದಿತ್ತು.

## ಚೀನಾದಲ್ಲಿ ಸಾವಿನ ಸಂಖ್ಯೆ ಹೆಚ್ಚಳ

ಕರೋನಾ ಸೋಂಕಿನಿಂದ ಚೀನಾದಲ್ಲಿ ಸೋಮವಾರ ರಾತ್ರಿ ಮತ್ತೆ 64 ಜನರು ಮೃತಪಟ್ಟಿದ್ದು, ಸಾವಿನ ಸಂಖ್ಯೆ ಮಂಗಳವಾರ 425ಕ್ಕೆ ಏರಿಕೆಯಾಗಿದೆ. ಇದುವರೆಗೆ 20,438 ಜನರಲ್ಲಿ ಕರೋನಾ ಸೋಂಕು ಇರುವುದು ದೃಢಪಟ್ಟಿದೆ. ಒಂದೇ ದಿನದಲ್ಲಿ 3 ಸಾವಿರ ಜನರಿಗೆ ಸೋಂಕು ತಗುಲಿದೆ.



ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಾಗಿರುವ ಚಿಕ್ಕನಂದೀಶ ಕೆಳನಂಗದ (39) ಅವರಿಗೆ ಕರೋನಾ ವೈರಸ್ ತಗುಲಿಲ್ಲ ಎನ್ನುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿದೆ. ಗೋಕರ್ಣಕ್ಕೆ ಭೇಟಿ ನೀಡಿರುವ ಇಬ್ಬರು ಥಾಯ್ಲೆಂಡ್ ಪ್ರವಾಸಿಗರನ್ನು ಆರೋಗ್ಯ ಇಲಾಖೆ ಸಿಬ್ಬಂದಿ ಪ್ರಾಥಮಿಕ ತಪಾಸಣೆಗೆ ಒಳಪಡಿಸಿದೆ. ಅಲ್ಲದೆ, ಪ್ರವಾಸಿಗರ ಮೇಲೆ ತೀವ್ರ ನಿಗಾ ಇರಿಸಲಾಗಿದೆ. ಗಡಿಭಾಗ ಜಿಲ್ಲೆಯಾದ ಚಾಮರಾಜನಗರದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ

ಕರೋನಾ ವೈರಸ್ ಬಗ್ಗೆ ರಾಜ್ಯದೆಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದೆ. ಯಾರಿಗಾದರೂ ವೈರಸ್ ಸೋಂಕು ಕಂಡುಬಂದಲ್ಲಿ ರಾಜ್ಯ ಸರ್ಕಾರದಿಂದಲೇ ಚಿಕಿತ್ಸಾ ವೆಚ್ಚ ಭರಿಸಲು ನಿರ್ಧರಿಸಲಾಗಿದೆ.

। ಶ್ರೀರಾಮುಲು ಆರೋಗ್ಯ ಸಚಿವ

## ಹಾಂಕಾಂಗ್‌ನಲ್ಲಿ ಮೊದಲ ಬಲಿ

ಹಾಂಕಾಂಗ್‌ನಲ್ಲಿ ಕರೋನಾ ವೈರಸ್‌ಗೆ ಓರ್ವ ಸಾವನ್ನಪ್ಪಿದ್ದಾನೆ. ಚೀನಾದ ವುಹಾನ್‌ನಿಂದ ಮರಳಿದ್ದ 39 ವರ್ಷದ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ. ಈ ಹಿನ್ನೆಲೆ ಏರ್ ಇಂಡಿಯಾ ಫೆ.8ರಿಂದ ಹಾಂಕಾಂಗ್‌ಗೆ ತೆರಳುವ ವಿಮಾನದ ಸಂಚಾರವನ್ನು ಸ್ಥಗಿತಗೊಳಿಸುವುದಾಗಿ ಹೇಳಿದೆ. ಈ ಸೋಂಕಿಗೆ ಕಳೆದ ಭಾನುವಾರ ಫಿಲಿಪ್ಪೀನ್ಸ್‌ನಲ್ಲಿ ಒಬ್ಬ ಮರಣಿಸಿದ್ದ.

ನಿತ್ಯಾನಂದ ವಿರುದ್ಧ ಸಿಬಿಐ ತನಿಖೆಗೆ ಮನವಿ